# ಆಕ್ಸಿಡೆಂಟಲ್ ಆ್ಯಕ್ಟರ್



## ದಿಯಾ ತೋರಿದ ದಿಕ್ಕಿನಲ್ಲಿ ದೀಕ್ಷಿತ್

**'ದಿಯಾ' ಸಿನಿಮಾ ಯಶಸ್ಸಿನ ಬೆನ್ನಲ್ಲೇ ಮತ್ತಷ್ಟು ಚಿತ್ರಗಳಲ್ಲಿ ನಟಿಸುತ್ತಿರುವ ದೀಕ್ಷಿತ್ ಶೆಟ್ಟಿ, ತಮ್ಮನ್ನು ತಾವು ಕರೆದುಕೊಳ್ಳುವುದು 'ಆಕಸ್ಮಿಕ ನಟ' ಎಂದು. ಪಾರ್ಟ್‌ಟೈಂ ಕೆಲಸಕ್ಕೆಂದು ಬಣ್ಣದ ಹಾದಿಗೆ ಬಂದ ಅವರಲ್ಲೀಗ ಸಿನಿಮಾರಂಗ ಹೊಸ ಹೊಸ ಕನಸುಗಳನ್ನು ತುಂಬಿದೆ.**

■ ಸುಮಲತಾ ಎನ್.

ಕಾನೂನು ಪದವಿ ಓದುತ್ತಲೇ, ಪಾರ್ಟ್ ಟೈಂ ಕೆಲಸದ ಹುಡುಕಾಟದಲ್ಲಿದ್ದ ದೀಕ್ಷಿತ್ ಶೆಟ್ಟಿ ಅವರಿಗೆ ಅಚಾನಕ್ಕಾಗಿ ಎಡತಾಕಿದ್ದು ಬಣ್ಣದ ಲೋಕ. ಬೇಕು–ಬೇಡದ ಗೊಂದಲದಲ್ಲೇ ಈ ರಂಗಕ್ಕೆ ಕಾಲಿಟ್ಟಿದ್ದ ಅವರೀಗ ಕನ್ನಡದೊಂದಿಗೆ ತೆಲುಗು ಸಿನಿಮಾರಂಗದಲ್ಲೂ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಸಿನಿಮಾರಂಗದ ಹೊಸ ಹೊಸ ಪ್ರಯತ್ನಗಳಲ್ಲಿ ತೊಡಗಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ.

ಮೂಲತಃ ಕುಂದಾಪುರದ ಬೈಲೂರಿನವರಾದ ದೀಕ್ಷಿತ್ ಶೆಟ್ಟಿ ಓದಿದ್ದು, ಬೆಳೆದಿದ್ದು ಬೆಂಗಳೂರಿನಲ್ಲಿ. ಓದಿನ ಜೊತೆಗೆ ಹೋಟೆಲ್‌ನಲ್ಲಿ ಕ್ಯಾಷಿಯರ್ ಆಗಿ, ಸೇಲ್ಸ್ ರೆಪ್ರೆಸೆಂಟೇಟಿವ್ ಆಗಿ ಕೆಲಸ ಮಾಡಿದ್ದ ಅವರು, ಎಲ್‌ಎಲ್‌ಬಿಗೆ ಸೇರಿದ ನಂತರ ಪಾರ್ಟ್ ಟೈಂ ಕೆಲಸದ ಹುಡುಕಾಟದಲ್ಲಿದ್ದರು. ಜೂನಿಯರ್ ಆರ್ಟಿಸ್ಟ್ ಆಗಿದ್ದ ಗೆಳೆಯನ ಸಲಹೆ ಅವರನ್ನು ಕಿರುತೆರೆಯತ್ತ ಕರೆತಂದಿತ್ತು. ಇದೇ ಕಾರಣವಾಗಿ ಅವರು ತಮ್ಮನ್ನು 'ಆಕ್ಸಿಡೆಂಟಲ್ ಆ್ಯಕ್ಟರ್' ಎಂದು ಕರೆದುಕೊಳ್ಳುತ್ತಾರೆ.

“ನನ್ನನ್ನು ನಾನು 'ಆಕಸ್ಮಿಕ ನಟ' ಎಂದು ಕರೆದುಕೊಳ್ಳುತ್ತೇನೆ. ಕಲಾವಿದನಾಗಬೇಕೆಂದು ನಾನು ಅಂದುಕೊಂಡವನೇ ಅಲ್ಲ. ಇಲ್ಲಿಗೆ ಬಂದ ಮೇಲೆ ನಟನೆ ಬಗ್ಗೆ ಆಸಕ್ತಿ–ಪ್ರೀತಿ ಬೆಳೆಯಿತು. ಎಷ್ಟೇ ಸಮಸ್ಯೆಗಳಿದ್ದರೂ ನಟಿಸುವಾಗ ಎಲ್ಲವೂ ಮರೆತುಹೋಗುತ್ತಿದ್ದವು. ಆಗ ನನಗನ್ನಿಸಿದ್ದು ಒಂದೇ. ನಟನೆ, ನನ್ನ ಸಮಸ್ಯೆಗಳನ್ನೆಲ್ಲ ಮರೆಸಿ ನನ್ನಿಂದ ಕೆಲಸ ಮಾಡಿಸುತ್ತಲೇ ಖುಷಿಕೊಡುತ್ತಿದೆ ಎಂದಾದರೆ, ನಟನೆಯನ್ನೇ ನಾನೇಕೆ ಪ್ರೀತಿಸಬಾರದು ಎಂದು. ಇದೀಗ ಆ ಪ್ರೀತಿ ನನ್ನನ್ನು ಸಿನಿಮಾರಂಗದವರೆಗೂ ಕರೆತಂದಿದೆ” ಎಂದು ಹೇಳುತ್ತಾರೆ ದೀಕ್ಷಿತ್. ನಂತರ ಉಷಾ ಭಂಡಾರಿ ಅವರ ಫಿಲ್ಮ್ ಸ್ಕೂಲ್‌ಗೆ ಸೇರಿದ ಅವರು, ಹಲವು ನಾಟಕಗಳಲ್ಲಿ ನಟಿಸಿದರು. ಅಲ್ಲಿಂದ ರಂಗಭೂಮಿಯ ನಂಟು ಬೆಸೆದುಕೊಂಡಿತು. 'ಅನೇಕ' ರಂಗತಂಡದಲ್ಲಿ ತೊಡಗಿ ಸಾಕಷ್ಟು ನಾಟಕಗಳಲ್ಲಿ ಅಭಿನಯಿಸಿದರು. ಅದೇ ಸಮಯ, ಕಿರುತೆರೆಯೂ ಕೈಬೀಸಿ ಕರೆಯಿತು.

'ಪರಿಶ್ರಮ ಪ್ರತಿಭೆಯನ್ನೂ ಮೀರಿ ಬೆಳೆಸಬಲ್ಲದು ಎಂಬುದನ್ನು ನನಗೆ ತೋರಿದ್ದು ರಂಗಭೂಮಿ. ಎಷ್ಟು ಪರಿಶ್ರಮ ಹಾಕುತ್ತೇವೋ, ಎಷ್ಟು ಶ್ರದ್ಧೆ, ನಿಷ್ಠೆಯಿಂದ ಇರುತ್ತೇವೋ ಅದಕ್ಕೆ ತಕ್ಕ ಫಲವನ್ನು ರಂಗಭೂಮಿ ನೀಡಿಯೇ ತೀರುತ್ತದೆ. ಯಾವುದೇ ಒಂದು ಪಾತ್ರದ ಜೀವವನ್ನು ಹಿಡಿಯುವುದು ಹೇಗೆಂಬ ಸಂಗತಿಯನ್ನು ರಂಗಭೂಮಿ ಕಲಿಸಿಕೊಟ್ಟಿದೆ...' ಎಂದು ತಮ್ಮನ್ನು ತಿದ್ದಿತೀಡಿದ ರಂಗಭೂಮಿಯ ಬಗ್ಗೆ ಸಂತಸದ ಮಾತುಗಳನ್ನಾಡುತ್ತಾರೆ ದೀಕ್ಷಿತ್.

'ಪ್ರೀತಿ ಎಂದರೇನು' ಧಾರಾವಾಹಿ ಮೂಲಕ ಕಿರುತೆರೆ ಪಯಣ ಆರಂಭಿಸಿದ ದೀಕ್ಷಿತ್, ಸಾಕ್ಷಿ, ನಾಗಿಣಿ ಧಾರಾವಾಹಿಯಲ್ಲಿ ನಟಿಸಿದರು. 'ನಾಗಿಣಿ' ಧಾರಾವಾಹಿಯಲ್ಲಿ ಮುಖ್ಯಪಾತ್ರ ವಹಿಸಿದ್ದು, ಜನರ ನಡುವೆ ಗುರುತಿಸಿಕೊಳ್ಳಲು ಅವರಿಗೆ ಅವಕಾಶ ಒದಗಿಸಿಕೊಟ್ಟಿತು.

'ನಾನು ಇಂದು ಸಿನಿಮಾದಲ್ಲಿ ನಾಯಕ ನಟನಾಗಿರುವುದಕ್ಕೆ ಮುಖ್ಯ ಕಾರಣ ಧಾರಾವಾಹಿ. ಯಾವುದೇ ಹಿನ್ನೆಲೆಯಿಲ್ಲದೆ ಬಂದ ನನ್ನಂತಹವರನ್ನು 'ಹೀರೊ' ಎಂದು ಪರಿಗಣಿಸುವುದು ಬಹಳ ಕಷ್ಟ. ನನ್ನನ್ನು ನಾಯಕ ನಟ ಎಂದು ಬಿಂಬಿಸಿಕೊಳ್ಳಲು ಧಾರಾವಾಹಿಯೇ ವಾಹಿನಿ' ಎಂದು ಅಭಿಮಾನದಿಂದ ಹೇಳುತ್ತಾರೆ.

ಧಾರಾವಾಹಿ, ಡಾನ್ಸ್ ಕರ್ನಾಟಕ ಡಾನ್ಸ್ ರಿಯಾಲಿಟಿ ಶೋನಲ್ಲಿದ್ದ ದೀಕ್ಷಿತ್‌ಗೆ 'ದಿಯಾ' ಸಿನಿಮಾ ಟರ್ನಿಂಗ್ ಪಾಯಿಂಟ್ ಆಯಿತು.

“ಇಡೀ ಸಿನಿಮಾರಂಗ ನಿಂತಿರುವುದು ಪ್ಯಾಷನ್ ಮೇಲೆ. ಅಂಥ ಪ್ಯಾಷನ್ ಹೊಂದಿದ್ದ ತಂಡ 'ದಿಯಾ' ಸಿನಿಮಾದ್ದಾಗಿತ್ತು. ಸಿನಿಮಾ ಎಂದರೇನು, ಅದರ ರೂಪುರೇಷೆ ಏನು? ಎಂಬ ಮೂಲ ವಿಷಯಗಳು ಚೆನ್ನಾಗಿ ಮನವರಿಕೆ ಮಾಡಿದ ಸಿನಿಮಾ ಕೂಡ. ರಂಗಭೂಮಿ–ಧಾರಾವಾಹಿ–ಸಿನಿಮಾ, ಈ ಮೂರಕ್ಕೂ ಕೂದಲೆಳೆಯ ಅಂತರವಿರುತ್ತದೆ. ಕೆಲವೊಮ್ಮೆ ಆ ಅಂತರ ಅರ್ಥವಾಗಲು ಹಲವು ವರ್ಷಗಳೇ ಹಿಡಿದುಬಿಡುತ್ತವೆ. ಆದರೆ ಆ ಪ್ರಕ್ರಿಯೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವಂಥ ಅವಕಾಶ ಸಿಕ್ಕಿದ್ದು 'ದಿಯಾ' ಸಿನಿಮಾದಲ್ಲಿ” ಎಂದು ತಮ್ಮ ಮೊದಲ ಸಿನಿಮಾ ಬಗ್ಗೆ ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಈ ನಡುವೆ ತೆಲುಗು ಸಿನಿಮಾರಂಗದಲ್ಲಿಯೂ ಕೆಲಸ ಮಾಡುವ ಅವಕಾಶ ಅವರಿಗೆ ದೊರೆತಿತ್ತು. ಮೀಟ್ ಕ್ಯೂಟ್ ಧಾರಾವಾಹಿಯಲ್ಲಿ ನಟಿಸಿದ ನಂತರ 'ರೋಸ್‌ವಿಲ್ಲಾ', 'ಮುಗ್ಗರು ಮೊನಗಾಳ್ಳು' ಸಿನಿಮಾಗಳಲ್ಲಿ ನಟಿಸಲು ಅವಕಾಶ ಸಿಕ್ಕಿತು. ಈಚೆಗೆ ಬಿಡುಗಡೆಯಾದ 'ದಸರಾ' ಸಿನಿಮಾ ಕೂಡ ಅವರಿಗೆ ಹೊಸ ಗುರುತು ತಂದುಕೊಟ್ಟಿದೆ.

ಸದ್ಯ ದೀಕ್ಷಿತ್ ನಟನೆಯ 'ಬ್ಲಿಂಕ್', 'ಕೆಟಿಎಂ' ಸಿನಿಮಾ ಹಾಗೂ ತೆಲುಗು ವೆಬ್‌ಸೀರಿಸ್ ಬಿಡುಗಡೆಗೆ ಸಿದ್ಧವಿವೆ. 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದು, ಇತರೆ ಮೂರು ಪ್ರಾಜೆಕ್ಟ್‌ಗಳಲ್ಲೂ ತೊಡಗಿಕೊಂಡಿದ್ದಾರೆ. ತಮ್ಮ ಈ ಪ್ರಯತ್ನಗಳು ಗೆಲ್ಲುವ ಆತ್ಮವಿಶ್ವಾಸದೊಂದಿಗೆ ಮುಂದಡಿ ಇಟ್ಟಿದ್ದಾರೆ. ■